ಆ) ಮಕ್ಕಳ ಸಂಖ್ಯೆಗನುಗುಣವಾಗಿ ೧೧೦ ಕೊಠಡಿಗಳು ಅವಶ್ಯವಿದ್ದು ಇವುಗಳ ನಿರ್ಮಾಣಕ್ಕೆ ಲೋಕೋಪಯೋಗಿ ಇಲಾಖೆ ದಿನಾಂಕ ೩-೬-೮೫ ರಂದು ಪಟ್ಟಿಯನ್ನು ಸಲ್ಲಿಸಿ ಹಂತ ಹಂತವಾಗಿ ಕಟ್ಟಡ ಕಟ್ಟಲು ಕ್ರಮ ಕೈಗೊಳ್ಳಲು ತಿಳಿಸಿದೆ.

ಇ) ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್,—ಅಧ್ಯಕ್ಷರೆ, ೧೪೬೮ ವಿದ್ಯಾರ್ಥಿಗಳ ಸಂಖ್ಯೆ ಇದೆ. ಆದರೆ ಕೊಠಡಿಗಳ ಸಂಖ್ಯೆ ಇರುವುದು ೧೧೦ ಮಾತ್ರ. ಅಂದರೆ ಒಂದು ಕೊಠಡಿಯಲ್ಲಿ ೧೪೬ ಹುಡುಗರು ಕುಳಿತುಕೊಳ್ಳುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಹೆಚ್ಚಿನ ಕೊಠಡಿಗಳನ್ನು ಧಾರವಾಡ ನಗರದಲ್ಲಿರುವ ಎಲ್ಲಾ ಶಾಲೆಗಳಿಗೆ ಕೊಡಿಸುವ ಯೋಜನೆಯನ್ನು ಮಾಡಿದ್ದೀರಾ?

ಶ್ರೀ ಎಚ್. ಜಿ. ಗೋವಿಂದೇಗೌಡ.—ಧಾರವಾಡ ನಗರದ ವಿಚಾರ ಮಾತ್ರ ಅಲ್ಲ, ಈ ರೀತಿಯ ಅವಶ್ಯಕತೆ ಬಹಳಷ್ಟು ಕಡೆಗಳಲ್ಲಿ ಇದೆ. ಆದ್ಯತೆಯನ್ನು ಕೊಟ್ಟು ಆದಷ್ಟು ಬೇಗ ಕೊಠಡಿಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಸಿ. ಪಿ. ಮೂಡಲಗಿರಿಯಪ್ಪ (ಗೈರುಹಾಜರು)

ಶ್ರೀ ಮೊಹಮದ್ ಲೈಕುದ್ದೀನ್ (ಮುಂದೆ ಹೋಗಿದೆ)

ಶ್ರೀ ನಂಜಯ್ಯನ ಮಠ್. (ಇವರ ಪರವಾಗಿ ಶ್ರೀ ಉಸ್ತಾದ್)

ಉರ್ದು ಶಿಕ್ಷಕರುಗಳ ನೇಮಕಾತಿ

೧೬೫೨ ಶ್ರೀ ನಂಜಯ್ಯನ್ ಮಠ್ (ಗುಳೇದಗುಡ್ಡ)—ವಾನ್ಯ ಶಿಕ್ಷಣ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ,

೧) ಗುಳೇದಗುಡ್ಡ ನಗರದ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಉರ್ದು ಭಾಷೆಯನ್ನು ಕಲಿಯಲು ಅವಕಾಶವಿದೆಯೇ?

೨) ಹಾಗಿದ್ದಲ್ಲಿ ಈ ಬಗ್ಗೆ ಶಿಕ್ಷಕರನ್ನು ನೇಮಕ ಮಾಡದಿರುವುದು ಸರ್ಕಾರದಪರಿಗೆ ಗೊತ್ತಿದೆಯೇ?

೩) ನೇಮಕ ಮಾಡುವ ವಿಚಾರವಾದರೂ ಸರ್ಕಾರದವರ ಗಮನದಲ್ಲಿದೆಯೇ?

೪) ಹಾಗಿದ್ದಲ್ಲಿ ಯಾವಾಗ ತುಂಬಲಾಗುತ್ತದೆ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು.)—

೧) ೮, ೯, ೧೦ನೇ ತರಗತಿಗಳಲ್ಲಿ ಉರ್ದು ಭಾಷೆಯನ್ನು ಕಲಿಯಲು ಅವಕಾಶವಿದೆ,

೨) ನಿಯೋಜನೆ ಮೂಲಕ ನೇಮಕ ಮಾಡಲಾಗಿದೆ.

೩) ಮತ್ತು ೪) ಮುಂದಿನ ವರ್ಗಾವಣೆ ಸಂದರ್ಭದಲ್ಲಿ ಖಾಯಂ ಆಗಿ ತುಂಬಲಾಗುವುದು.

ಶ್ರೀ ಎಂ. ಎಲ್. ಉಸ್ತಾದ್.—ಮಾನ್ಯ ಅಧ್ಯಕ್ಷರೆ, ೧೯೮೦-೮೧ನೇ ಸಾಲಿನಲ್ಲಿ ಈ ಉರ್ದು ಭಾಷೆ ಜೂನಿಯರ್ ಕಾಲೇಜುಗಳಲ್ಲಿ ಪ್ರಾರಂಭ ಆಯಿತು. ಆದರೆ ಅಂದಿನಿಂದ ಇವೊತ್ತಿನ ವರೆಗೆ ಉರ್ದುಶಿಕ್ಷಕರನ್ನು ತುಂಬಿಲ್ಲ. ಆದರೆ ಪದೆ ಪದೆ ಅಧಿಕಾರಿಗಳನ್ನು ಕೇಳಿಪಾಗ, ಶಿಕ್ಷಕರನ್ನೇನೊ ಡೆಪ್ಯೂಟ್ ಮಾಡುತ್ತಾರೆ. ಆದರೆ ಡೆಪ್ಯೂಟ್ ಮಾಡಿದ ಉಪಾದ್ಯಾಯರುಗಳು ಬರುವುದಿಲ್ಲ. ಆದುದರಿಂದ ಈ ನೇಮಕಗಳನ್ನು ಯಾವಾಗ ಮಾಡುತ್ತೀರಿ ಎಂದು ನಿರ್ದಿಷ್ಟವಾಗಿ ಹೇಳಬೇಕು.

ಶ್ರೀ ಎಚ್. ಜಿ. ಗೋವಿಂದೇಗೌಡರು — ಖಾಲಿ ಜಾಗಗಳಿಗೆ ಎಲ್ಲಿ ಕಡಿವೆ ಮಕ್ಕಳು, ಹೆಚ್ಚು ಉಪಾಧ್ಯಾಯರು ಇರುತ್ತಾರೊ ಅಲ್ಲಿಂದ ಉಪಾಧ್ಯಾಯರುಗಳನ್ನು ಡೆಪ್ಯೂಟ್ ಮಾಡುತ್ತೇವೆ. ಖಾಲಿ ಇರುವಂತಹ ಜಾಗಗಳಿಗೆ ಮುಂದೆ ಡಿ.ಎಲ್.ಆರ್.ಸಿ. ಮಾಡುವವರಿದ್ದೇವೆ, ಸಧ್ಯದಲ್ಲಿ ಅಂದರೆ ಎರಡು

ತಿಂಗಳೊಳಗಾಗಿ ಮಾಡುವ ಯೋಚನೆ ಇದೆ. ಅಂತಹ ಸಂದರ್ಭದಲ್ಲಿ ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿಗೆ ಕೂಡಲೆ ತುಂಬುವ ವ್ಯವಸ್ಥೆಯನ್ನು ಮಾಡುತ್ತೇವೆ.

ಅಧ್ಯಕ್ಷರು —ಶ್ರೀದ್ಯಾವಿರಪ್ಪ (ಗೈರು ಹಾಜರಿ)

ಶ್ರೀ ರಂಗದೇವರಾಯಲು (ಮುಂದೆ ಹೋಗಿದೆ)

ಶ್ರೀ ಬಿ ಬಸವಲಿಂಗಪ್ಪ (ಮುಂದೆ ಹೋಗಿದೆ)

ಶ್ರೀ ಆರ್. ರೋಷನ್ ಬೇಗ್ (ಗೈರು ಹಾಜರು)

ಶ್ರೀ ಎಂ. ಎಸ್. ಕೃಷ್ಣನ್ (ಗೈರು ಹಾಜರು)

ಕೃಷಿ ಇಲಾಖೆಯಲ್ಲಿನ ವಿವಿಧ ರೀತಿಯ ವಾಹನಗಳ ಬಗ್ಗೆ.

೧೯೦೮. ಶ್ರೀ ಮಂಹಮದ್ ಮೋಹಿನುದ್ದೀನ್ (ಚಾಮರಾಜಪೇಟೆ).—ಮಾನ್ಯ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷಿ ಇಲಾಖೆಯಲ್ಲಿ ೩೧-೧-೧೯೮೬ರಲ್ಲಿ ಇರುವ ಒಟ್ಟು ವಿವಿಧ ರೀತಿಯ ವಾಹನಗಳ ಸಂಖ್ಯೆ ಎಷ್ಟು ?

ಆ) ಕೃಷಿ ಇಲಾಖೆಯಲ್ಲಿ ೩೧-೧-೧೯೮೬ರಲ್ಲಿ ವಿವಿಧ ವರ್ಗಗಳಲ್ಲಿ ಇರುವ ಒಟ್ಟು ನೌಕರರ ಸಂಖ್ಯೆ ಎಷ್ಟು ?

ಇ) ವಿಶ್ವಬ್ಯಾಂಕ್ ಯೋಜನೆಯ ರಾಷ್ಟ್ರೀಯ ಕೃಷಿ ವಿಸ್ತರಣಾ ಯೋಜನೆ ಒಂದನೇ ಹಂತಕ್ಕೆ ೩೧-೧-೧೯೮೬ರವರೆಗೆ ಮಂಜೂರು ನೀಡಿದ ಹಾಗೂ ಖರ್ಚು ಮಾಡಿದ ಒಟ್ಟು ಹಣವೆಷ್ಟು ?

ಈ) ವಿಶ್ವಬ್ಯಾಂಕ್ ಯೋಜನೆಯ ರಾಷ್ಟ್ರೀಯ ಕೃಷಿ ವಿಸ್ತರಣಾ ಯೋಜನೆ ಎರಡನೇ ಹಂತಕ್ಕೆ ನಿಗದಿ ಮಾಡಿದ ಹಣವೆಷ್ಟು?

ಉ) ಹಣ ಖರ್ಚು ಮಾಡಿದ ಹಾಗೂ ಖರ್ಚು ಮಾಡುವ ವಿವಿಧ ರೀತಿಯ ಕಾರ್ಯಗಳಾವುವು ?

ಶ್ರೀ ಎಮ್. ಪಿ. ಪ್ರಕಾಶ್ (ಕೃಷಿ ರಾಜ್ಯ ಮಂತ್ರಿಗಳು).—

ಅ)

೧)	ಮೊಟಡಾರ ವ್ಯಾನ್ (ಡೀಸಲ್)	೧೦
೨)	ಮಿನಿಬಸ್ (ಡೀಸಲ್)	೧೧
೩)	ಕಾರು (ಪೆಟ್ರೋಲ್)	೧೪
೪)	ಜೀಪು (ಪೆಟ್ರೋಲ್)	೨೪೬
೫)	ಜೀಪು (ಡೀಸಲ್)	೧೯೦
	ಒಟ್ಟು	೪೭೧

ಆ) ಒಟ್ಟು ನೌಕರರ ಸಂಖ್ಯೆ. ೧೨,೪೪೧

ಎ	ವರ್ಗ	೪೧೮
ಬಿ	,,	೨,೨೧೬
ಸಿ	,,	೮,೦೪೨
ಡಿ	,,	೧,೮೧೫

ಇ) ಒಟ್ಟು ನಿಗದಿಪಡಿಸಿದ ಹಣ ... ರೂ. ೨೦.೫೮ ಕೋಟಿ

ಒಟ್ಟು ಖರ್ಚಾದ ಹಣ ... ರೂ. ೨೮.೧೪ ಕೋಟಿ

ಈ) ರೂ. ೨೫.೦೯ ಕೋಟಿ

ಉ) ವಿವರಗಳನ್ನು ಅನುಬಂಧ—೧ರಲ್ಲಿ ಕೊಡಲಾಗಿದೆ.